KANNADA PRABHA 18 FEB 2008

# 'ಬೌದ್ಧಿಕ ಬೆಳವಣಿಗೆಗೆ ಆದ್ಯತೆ ನೀಡಿ'

**ಕನ್ನಡಪ್ರಭ ವಾರ್ತೆ, ಮೈಸೂರು, ಫೆ.17**

ದೇಶದಲ್ಲಿ ಬೌದ್ಧಿಕ ಚಿಂತನೆಯ ಮಟ್ಟ ಅತಿ ಹೆಚ್ಚಿದ್ದು, ಅದನ್ನು ಬೆಳೆಸುವ ಕಾರ್ಯ ತ್ವರಿತಗತಿಯಲ್ಲಿ ನಡೆಯಬೇಕು ಎಂದು ಇಶಾ ಫೌಂಡೇಶನ್ ಸಂಸ್ಥಾಪಕ ಜಗ್ಗಿ ವಾಸುದೇವ ಸ್ವಾಮೀಜಿ ಇಲ್ಲಿ ಹೇಳಿದರು.

ರೋಟರಿ ಮೈಸೂರು ಮತ್ತು ವಿಜಯ ಫೌಂಡೇಶನ್ ಭಾನುವಾರ ಏರ್ಪಡಿಸಿದ್ದ ತಮ್ಮ ಸನ್ಮಾನ ಕಾರ್ಯಕ್ರಮಕ್ಕೂ ಮುನ್ನ ಅವರು ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ದೇಶದಲ್ಲಿ ಬೌದ್ಧಿಕ ಬೆಳವಣಿಗೆಗೆ ಒತ್ತು ನೀಡಬೇಕು. ಇದಕ್ಕೆ ಕಾರಣವೆಂದರೆ ದೇಶದಲ್ಲಿ ಅಪಾರವಾದ ಸಾಂಸ್ಕೃತಿಕ ಹಾಗೂ ಪಾರಂಪರಿಕ ಹಿನ್ನೆಲೆಯಿದೆ. ಧಾರ್ಮಿಕ ಆಚರಣೆಗಳು ಸಾವಿರಾರು ವರ್ಷಗಳಿಂದ ಇರುವುದರಿಂದ ಜನರ ಬೌದ್ಧಿಕ ಮಟ್ಟವೂ ಹೆಚ್ಚಿದೆ. ಹಾಗಾಗಿ ಜನರ ಬೌದ್ಧಿಕ ಮಟ್ಟವನ್ನು ಬೆಳೆಸುವುದರ ಮೂಲಕ ದೇಶದ ಬೆಳವಣಿಗೆಯನ್ನು ತ್ವರಿತವಾಗಿಸುವುದು ಸದ್ಯಕ್ಕೆ ಇರುವ ಗುರುತರ ಜವಾಬ್ದಾರಿ ಎಂದು ಅವರು ಹೇಳಿದರು.

ದೇಶದಲ್ಲಿ ಸಾವಿರಾರು ವರ್ಷಗಳಿಂದ ವ್ಯಕ್ತಿ ಸ್ವಾತಂತ್ರ್ಯಕ್ಕೆ ಹೆಚ್ಚಿನ ಒತ್ತು ನೀಡಲಾಗಿದೆ. ಇದಕ್ಕೆ ಕಾರಣ ಇಲ್ಲಿ ಬೋಧಿಸಲಾಗುತ್ತಿದ್ದ ಧಾರ್ಮಿಕ ಹಾಗೂ ಸಾಂಸ್ಕೃತಿಕ ಪಾಠಗಳು. ಹಾಗಾಗಿ ಧಾರ್ಮಿಕ ಅಡೆತಡೆಗಳು ಇಲ್ಲಿ ಇದ್ದವಾದರೂ ವೈಯಕ್ತಿಕ ಸ್ವಾತಂತ್ರ್ಯಕ್ಕೆ ಬೆಲೆಯಿತ್ತು. ಹಾಗಾಗಿ ಸ್ವತಂತ್ರ ಚಿಂತನೆ, ನಿರ್ಧಾರ ತೆಗೆದುಕೊಳ್ಳುವುದು ಸಾಧ್ಯವಾಗುತ್ತಿತ್ತು. ಈಗ ಭಾರತ ಇದನ್ನು ಅಸ್ತ್ರವಾಗಿ ಬಳಸಿಕೊಂಡು ಜಾಗತಿಕವಾಗಿ ಬೆಳೆಯಬಹುದು. ಬೇರೆ ದೇಶದ ಜನರಿಗೆ ಇರದ ವಿಶೇಷವಾದ ಈ ಅನುಕೂಲ ಭಾರತೀಯರಿಗಿದೆ ಎಂದು ಅವರು ಹೇಳಿದರು.



*ಇಶಾ ಫೌಂಡೇಶನ್‌ನ ಸ್ವಾಮೀಜಿ ಜಗ್ಗಿ ವಾಸುದೇವ್*

ವಿಶ್ವದ ರಹಸ್ಯಗಳೆಲ್ಲ ಬಯಲಾದವು ಎಂದು ವಿಜ್ಞಾನಿಗಳು ಹೇಳುತ್ತಾರೆ. ಆದರೆ ಬಯಲಾಗದ ರಹಸ್ಯಗಳು ವಿಶ್ವದಲ್ಲಿ ಸಾಕಷ್ಟಿವೆ ಎಂದು ಹೇಳಿದರು.

■ **ವಿಜ್ಞಾನ ಮನೋವಿಕಾಸಕ್ಕೆ ಅಗತ್ಯ:** ವಿಜ್ಞಾನ ಮನೋವಿಕಾಸಕ್ಕೆ ಅತ್ಯಗತ್ಯ. ಬೌದ್ಧಿಕ ಬೆಳವಣಿಗೆಗೆ ಆಧುನಿಕ ತಂತ್ರಜ್ಞಾನಗಳನ್ನು ಬಳಸಿಕೊಂಡರೆ ಒಳ್ಳೆಯದು. ವಿಜ್ಞಾನ ಹಾಗೂ ಬೌದ್ಧಿಕತೆ ಎರಡೂ ಬೇರೆ ಬೇರೆಯಂತೆ ಕಂಡರೂ, ಗುಣಲಕ್ಷಣದಲ್ಲಿ ಅವೆರಡೂ ಒಂದೆ. ಹಾಗಾಗಿ ಧರ್ಮ ಹಾಗೂ ವಿಜ್ಞಾನ ಸಹೋದರರು. ಎರಡೂ ಶೋಧನೆಯಲ್ಲೇ ನಂಬಿರುತ್ತವೆ. ವಿಜ್ಞಾನ ಸಾಕ್ಷಿಯನ್ನು ಕೇಳಿದರೆ, ಧರ್ಮ ನಂಬಿಕೆಯನ್ನು ಬಯಸುತ್ತದೆ. ಇದೇ ವ್ಯತ್ಯಾಸ ಎಂದು ಅವರು ಹೇಳಿದರು.

ಮೈಸೂರಿನಲ್ಲಿ ತಮ್ಮ ಇಶಾ ಫೌಂಡೇಶನ್ ಶಾಖೆಯನ್ನು ಪ್ರಾರಂಭಿಸುವ ಆಸೆಯಿದೆ. ಇದಕ್ಕೆ ಕಾರಣ 1982 ರಲ್ಲಿ ಮೈಸೂರಿನ ಜತೆ ತಮಗೆ ಉತ್ತಮ ಬಾಂಧವ್ಯವಿತ್ತು. ಈಗಲೂ ತಮ್ಮ ಸಂಸಾರ ಮೈಸೂರಿನಲ್ಲಿಯೇ ಇದೆ. ಇಶಾ ಯೋಗ ಕೇಂದ್ರದ ಚಟುವಟಿಕೆಗಳನ್ನು ಮತ್ತಷ್ಟು ವಿಸ್ತರಿಸಲಿದ್ದೇವೆ ಎಂದು ಅವರು ಹೇಳಿದರು.